# ಬೃಹತ್ ಮಾನವ ಇಂದ್ರಚಾಪ!

ಪ್ರಾಥಮಿಕ ಶಾಲೆಯಲ್ಲಿ ‘ವಿಬ್‌ಗ್ಯೊರ್’ (VIBGYOR) ಪದದ ಮೂಲಕ ಕಾಮನಬಿಲ್ಲಿನ ಸಪ್ತವರ್ಣಗಳನ್ನು ಕಂಠಪಾಠ ಮಾಡಿರುವ ಫಿಲಿಪ್ಪೀನ್ಸ್‌ನ ಮನಿಲಾದ ಸಾವಿರಾರು ವಿದ್ಯಾರ್ಥಿಗಳು ಒಂದುಗೂಡಿ ರಚಿಸಿದ ಬೃಹತ್ ಮಾನವ ನಿರ್ಮಿತ ಕಾಮನಬಿಲ್ಲಿದು! ಆಗಸದಲ್ಲಿ ಮಳೆ–ಬಿಸಿಲಿನ ಕಣ್ಣುಮುಚ್ಚಾಲೆಯಾಟಕ್ಕೆ ರಂಗಿನ ಚಿತ್ತಾರ ಬಿಡಿಸುವ ಮದನ ಧನುಸ್ಸು ಭೂಮಾತೆಯ ಮೈಮೇಲೆ ಮಂಜಿನ ಮುಂಜಾನೆ ಪ್ರತಿಫಲಿತವಾಗಿರುವಂತೆ ಗೋಚರಿಸುತ್ತಾ ಮನಸೆಳೆಯುತ್ತಿದೆ ಈ ಪಕ್ಷಿನೋಟ.

ಈ ಇಂದ್ರಚಾಪವನ್ನು ರಚಿಸುವಲ್ಲಿ ವಿದ್ಯಾರ್ಥಿಗಳ ಜೊತೆ ಶಿಕ್ಷಕ ವರ್ಗವೂ ಜೊತೆಗೂಡಿರುವುದು ಉಲ್ಲೇಖಾರ್ಹ. ಪ್ರೀತಿ–ಪ್ರೇಮ ಭಾವನೆಯ ಪ್ರತಿಬಿಂಬವಾಗಿ ಫಿಲಿಪ್ಪೀನ್ಸ್ ದೇಶದ ಮನಿಲಾದಲ್ಲಿರುವ ಸುಮಾರು 31,000 ವಿದ್ಯಾರ್ಥಿಗಳು ಹಾಗೂ ಶಿಕ್ಷಕ ವರ್ಗದವರು ಈ ಕಾರ್ಯದಲ್ಲಿ ಕೈಜೋಡಿಸಿದ್ದಾರೆ. ಒಳತ್ರಿಜ್ಯದಿಂದ ಆರಂಭಿಸಿ ಹೊರ ತ್ರಿಜ್ಯದ ತನಕದ ನೇರಳೆ, ಕಡುನೀಲಿ, ತಿಳಿನೀಲಿ, ಹಸಿರು, ಹಳದಿ, ಕಿತ್ತಳೆ ಮತ್ತು ಕೆಂಪು ಎಂಬುದಾಗಿ ಒಟ್ಟು 7 ರಂಗುಗಳ ಬಟ್ಟೆ ತೊಟ್ಟುಕೊಂಡ ಮಾನವ ವರ್ಣ ವಕ್ರೀಭವನಗಳು ಅರ್ಧಚಂದ್ರಾಕೃತಿಯಲ್ಲಿ ವ್ಯವಸ್ಥಿತ ರೀತಿಯಲ್ಲಿ ಕಲೆತು ನಿಂತು ಈ ಬೃಹತ್ ಬಿಲ್ಲನ್ನು ನಿರ್ಮಿಸಿದ್ದೊಂದು ಬೃಹತ್ ಸಾಧನೆಯೇ ಸರಿ. ತನ್ನ ಗಾತ್ರ ಹಾಗೂ ವಿಶಿಷ್ಟತೆಗಾಗಿ ಈ ಕಾಮನಬಿಲ್ಲು ಈಗಾಗಲೇ ಗಿನ್ನೆಸ್ ಪುಸ್ತಕದಲ್ಲಿಯೂ ದಾಖಲೆಗೊಂಡಿದೆ.

■ **ರಮಣ್ ಶೆಟ್ಟಿ ರೆಂಜಾಳ್**

